# ಬುದ್ಧನಂತಲ್ಲದ ಗೌತಮ



■ ಎನ್ವಿ

ಗೌತಮ್ ಗಂಭೀರ್ ಹೆಸರಲ್ಲಿ ಬುದ್ಧನಿದ್ದಾನೆ. ಆದರೆ, ಈ ಗೌತಮ್ ಗಂಭೀರ್ ಅವರಲ್ಲಿ ಬುದ್ಧನ ಗುಣವಿಲ್ಲ... ಹೀಗೊಂದು ಲಘು ಧಾಟಿಯಲ್ಲಿ ವೀರೇಂದ್ರ ಸೆಹ್ವಾಗ್ ಕೆಲವೇ ಆಪ್ತೇಷ್ಟರ ನಡುವೆ ವಿಶ್ಲೇಷಣಾ ಶೈಲಿಯ ಒನ್‌ಲೈನರ್ ತೇಲಿಬಿಟ್ಟಿದ್ದ ಕಾಲವೊಂದು ಇತ್ತು. ಸೆಹ್ವಾಗ್, ಗಂಭೀರ್, ಶಿಖರ್ ಧವನ್ – ಮೂವರೂ ಹೆಚ್ಚು ಕಡಿಮೆ ಏಕಕಾಲದಲ್ಲಿ ದೆಹಲಿ ಕ್ರಿಕೆಟ್‌ಗಲ್ಲಿಗಳಲ್ಲಿ ದೇಸಿ ಕ್ರಿಕೆಟ್‌ನಲ್ಲಿ ಸಂಚಲನ ಸೃಷ್ಟಿಸಿದ್ದವರು. ಸೆಹ್ವಾಗ್ ಈ ಮೂವರಲ್ಲಿ ಕ್ರಿಕೆಟಿಗರಾಗಿ ಹೆಚ್ಚು ಜನಪ್ರಿಯತೆ ಪಡೆದುಕೊಂಡರು.

ಗಂಭೀರ್ ಈಗ ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ರಾಹುಲ್ ದ್ರಾವಿಡ್ ಇದ್ದ ಕುರ್ಚಿ ಮೇಲೆ ಕುಳಿತಿದ್ದಾರೆ. ದ್ರಾವಿಡ್ ಕ್ರಮವೇ ಬೇರೆ, ಗಂಭೀರ್ ವೈಖರಿಯೇ ಬೇರೆ. ವ್ಯಕ್ತಿತ್ವಗಳೂ ಭಿನ್ನ. ಗಾಯಾಳುವಿಗೆ ಮುಲಾಮು ಹಚ್ಚುವ ಪಿತೃತ್ವದ ಗುಣ ದ್ರಾವಿಡ್ ಅವರದ್ದು. 'ಗಾಯಗೊಂಡವರು ಸರಿ ಮಾಡಿಕೊಂಡು ಎದ್ದು ಬರಬೇಕು' ಎಂದು ತಾಕೀತು ಮಾಡುವ ಹೊಸಕಾಲದ ನಿರ್ದಾಕ್ಷಿಣ್ಯ ಪಿ.ಟಿ. ಟೀಚರ್ ಶೈಲಿಯ ನುಡಿಪೆಟ್ಟು ಗಂಭೀರ್ ಅವರದ್ದು.

ಕೋಚ್ ಆಗಿ ಆಯ್ಕೆಯಾದ ನಂತರ ಅವರ ಮೊದಲ ಮಾತಿನ ಸಾರಾಂಶ ಕೇಳಿದರೆ ಇದು ಅರಿವಾಗುತ್ತದೆ. ಈ ಕಾಲದಲ್ಲಿ ರೆಡ್‌ಬಾಲ್ ಅಥವಾ ವೈಟ್ ಬಾಲ್ ಸ್ಪೆಷಲಿಸ್ಟ್ ಎನ್ನುವುದನ್ನೆಲ್ಲ ಪಕ್ಕಕ್ಕೆ ಇಡಬೇಕು. ಎರಡೂ ಚೆಂಡುಗಳಲ್ಲಿ ಆಡಬೇಕು. ಏಕದಿನ, ಟೆಸ್ಟ್, ಟ್ವೆಂಟಿ20 – ಮೂರೂ ಮಾದರಿಗಳಲ್ಲಿ ದೇಶಕ್ಕಾಗಿ ಆಡಬೇಕು. ಎಲ್ಲಿಯವರೆಗೆ ಕಸುವು ಇರುವುದೋ ಅಲ್ಲಿಯವರೆಗೆ ಆಡುವುದಷ್ಟೇ ಮುಖ್ಯವಾಗಬೇಕು. ಗಾಯಗೊಳ್ಳುವ ಕುರಿತು ಆತಂಕ ಇರಕೂಡದು. ಗಾಯ–ನೋವು ನಿವಾರಿಸಿಕೊಂಡು ಮತ್ತೆ ಆಡಬೇಕು. ಈ ವಾಕ್ಯಗಳಲ್ಲೇ ಗಂಭೀರ್ ಯಾವ ಸಂದೇಶ ನೀಡಿದ್ದಾರೆನ್ನುವುದು ಸ್ಪಷ್ಟ.

ತರಬೇತುದಾರರಾಗಿ ಗಂಭೀರ್ ಅನುಭವ ಚಿಕ್ಕದು. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್‌ನಲ್ಲಿ ಅವರು ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎರಡು ಸಲ ಪ್ಲೇ–ಆಫ್‌ಗೆ ಕೊಂಡೊಯ್ದಿದ್ದಾರೆ. ಈ ವರ್ಷ ಕೋಲ್ಕತ್ತ ನೈಟ್ ರೈಡರ್ಸ್ (ಕೆಕೆಆರ್) ಐಪಿಎಲ್ ಕಪ್ ಎತ್ತಿಹಿಡಿದಾಗ, ತಂಡದ ಮಾಲೀಕ ಶಾರುಖ್ ಮುಕ್ತಕಂಠದಿಂದ ಗಂಭೀರ್ ಪಾಠದ ವೈಖರಿಯನ್ನು ಶ್ಲಾಘಿಸಿದ್ದರು.

ಹದಿನೈದು ಕ್ರಿಕೆಟಿಗರನ್ನು ಮೊದಲು ಹೆಕ್ಕುವಲ್ಲಿ ತರಬೇತುದಾರರ ಪಾತ್ರ ಇರುತ್ತದೆ. ಅದರಲ್ಲಿ ಇರುವವರ ಸಾಮರ್ಥ್ಯವನ್ನು ಸಾಣೆಗೆ ಒಡ್ಡುವುದು ನಂತರದ ಪ್ರಕ್ರಿಯೆ. ಗಂಭೀರ್ ದಾಳಿಕೋರ ಮನಸ್ಥಿತಿಯವರು. ಅವರು ಖುದ್ದು ಬ್ಯಾಟಿಂಗ್ ಮಾಡುತ್ತಿದ್ದಾಗ ವೇಗದ ಬೌಲರ್‌ಗಳಿಗೆ ಹೊರನುಗ್ಗಿ ಆಫ್‌ಸೈಡ್‌ನತ್ತ ಹೊಡೆಯುತ್ತಿದ್ದ ಪರಿಯನ್ನು ನಾವೆಲ್ಲ ಕಂಡಿದ್ದೇವೆ. ಅಂತಹ ದಾಳಿ ಇಡುವ ಧೋರಣೆಯ ಕಾರಣಕ್ಕೇ ಅವರು ಕೆಟ್ಟ ಹೊಡೆತಗಳಿಂದ ವಿಕೆಟ್ ಒಪ್ಪಿಸಿರುವ ಪ್ರಸಂಗಗಳೂ ಇವೆ.

ಗಂಭೀರ್ ಆಡುತ್ತಿದ್ದ ಕಾಲದಲ್ಲಿ ಸಚಿನ್, ಸೆಹ್ವಾಗ್, ಯುವರಾಜ್ ಸಿಂಗ್, ಕೊನೆ ಕೊನೆಯಲ್ಲಿ ಮಹೇಂದ್ರ ಸಿಂಗ್ ಧೋನಿ ತರಹದ ಸೂಪರ್‌ಸ್ಟಾರ್‌ಗಳು ತಂಡದಲ್ಲಿ ಇದ್ದರು. ಅವರ ನೆರಳಿನಲ್ಲೇ ತಮ್ಮ ಅಸ್ಮಿತೆಗಾಗಿ ಅವರು ಹೋರಾಡಬೇಕಿತ್ತು. ಆಮೇಲೆ ಅವರು ಸಂಸದರಾಗಿ ರಾಜಕೀಯ ಮೊಗಸಾಲೆಯಲ್ಲೂ ನಡೆದು ಬಂದರು. ಅವರು ಬಿಜೆಪಿ ನಿಷ್ಠರು. 'ಬಿಸಿಸಿಐ' ಚುಕ್ಕಾಣಿ ಈಗ ಅಮಿತ್ ಶಾ ಪುತ್ರ ಜಯ್ ಶಾ ಅವರ ಕೈಲಿ ಇದೆ. ಹೀಗಾಗಿ, ಅವರ ಪಕ್ಕದಲ್ಲಿ ಗಂಭೀರ್ ಆಸೀನರಾಗುವುದರಲ್ಲೂ ಒಂದು ರಾಜಕೀಯ ಬೆಸೆದುಕೊಂಡಿರುವುದನ್ನೂ ಅಲ್ಲಗಳೆಯಲಾಗದು.

ಗಂಭೀರ್ ಅವರಿಗಿನ್ನೂ 42 ವರ್ಷ ವಯಸ್ಸು. ಇಷ್ಟು ಚಿಕ್ಕ ವಯಸ್ಸಿನ ಯಾವ ಕೋಚ್ ಕೂಡ ಇದುವರೆಗೆ ಭಾರತ ತಂಡವನ್ನು ರೂಪಿಸಿದ ಉದಾಹರಣೆ ಇಲ್ಲ. 'ಯಂಗ್ ಇಂಡಿಯಾ' ಮಂತ್ರವನ್ನು ಅವರು ಎಷ್ಟು ಜೋರಾಗಿ ಕೇಳಿಸಬಲ್ಲರು ಎನ್ನುವುದು ಈಗ ಉಳಿದಿರುವ ಕುತೂಹಲ.

ಗಂಭೀರ್, ಕ್ರಿಕೆಟಿಗರನ್ನು ದೇವಪುರುಷರಂತೆ ಕಾಣುವ ಪರಿಪಾಟವನ್ನು ವಿರೋಧಿಸುವವರ ಪೈಕಿ. ಈ ವಿಷಯದಲ್ಲಿ ಅವರು ಅನೇಕ ಸಲ ವಾಚ್ಯವಾಗಿ ಪ್ರತಿಕ್ರಿಯಿಸಿದ್ದಾರೆ. ಕೆಲವರು ಇದನ್ನೇ ಹೊಟ್ಟೆಉರಿ ಎಂದು ವಿಶ್ಲೇಷಿಸಿದ್ದೂ ಇದೆ.

ದೆಹಲಿ ರಣಜಿ ತಂಡದ ನಾಯಕನಾಗಿ ಕೆಲಸ ಮಾಡಿದ ಅನುಭವ ಇರುವ ಗಂಭೀರ್ ಎದುರಲ್ಲಿ ಈಗ ಇರುವ ಸವಾಲು, ಹಿರಿಯರು ಕೊಂಡಿ ಕಳಚಿಕೊಳ್ಳುವ ಹೊತ್ತಿನಲ್ಲಿ ತಂಡವನ್ನು ಕಟ್ಟಬೇಕಾಗಿರುವುದು. ರೋಹಿತ್ ಶರ್ಮ, ವಿರಾಟ್ ಕೊಹ್ಲಿ ಇಬ್ಬರಿಗೂ ದೊಡ್ಡ ಸಾಣೆಯೇನೂ ಈಗ ಬೇಕಾಗಿಲ್ಲ. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಹೊಸಬರ ತಂಡವನ್ನು ಸಶಕ್ತವಾಗಿ ಹೇಗೆ ರೂಪಿಸಬೇಕು ಎನ್ನುವುದಷ್ಟೆ ಸದ್ಯಕ್ಕೆ ಮುಖ್ಯ.

ಬೌಲಿಂಗ್ ವಿಭಾಗದಲ್ಲಿ ಭಾರತ ತಂಡದಲ್ಲಿ ಎದ್ದುಕಾಣುವ ಊನಗಳಿವೆ. ಫೀಲ್ಡಿಂಗ್ ತುಸುವೂ ಸಡಿಲವಾಗದಂತೆ ನಿಗಾ ವಹಿಸುವ ಸವಾಲೂ ಇದೆ.

ಅನುಭವಿಗಳ ಜಲಪಾತದ ಹರಿವು ಒಂದು ಕಡೆ. ಹೊಸಬರ ಉತ್ಸಾಹದ ಚಿಲುಮೆ ಇನ್ನೊಂದು ಕಡೆ. ನಡುವೆ ನಿಂತು ಗಂಭೀರ್ ಎರಡನ್ನೂ ಹೇಗೆ ಸರಿದೂಗಿಸುವರೋ ನೋಡೋಣ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65